KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

No. KU/Aca(S&T)/JS-131/NASSCOM/2023-24/1323 Date: 24 NOV 2023

## ಸುತ್ತೋಲೆ

ವಿಷಯ: Artificial Intelligence ಮತ್ತು Digital Fluency ವಿಷಯಗಳನ್ನು ಇಚ್ಛೆಯುಳ್ಳ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಕಲಿಯಲು ಕ್ರಮ ಕೈಗೊಳ್ಳುವ ಕುರಿತು.

ಉಲ್ಲೇಖ:
1. ಎಲ್ಲ ಪ್ರಾಚಾರ್ಯರುಗಳ ಮನವಿ ದಿನಾಂಕ: 15.06.2023.
2. ಕಾರ್ಯಾನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರ ಪತ್ರ ಸಂ. ಕರಾಉಶಿಪ / 2023–24 / 442, ದಿನಾಂಕ: 27.06.2023.
3. ಅಧೀನ / ಸಂಲಗ್ನ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯ ದಿನಾಂಕ: 14.07.2023.
4. ವಿದ್ಯಾವಿಷಯಕ ಪರಿಷತ್ ಸಭೆಯ ಠರಾವು ಸಂ. 21, ದಿನಾಂಕ: 31.08.2023.
5. ಕಚೇರಿ ಸುತ್ತೋಲೆ ಸಂ. KU/Aca(S&T)/JS-131/NASSCOM/2023-24/58, ದಿ. 04.09.2023.
6. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 24.11.2023

-----

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಉಲ್ಲೇಖ–5ರ ಪ್ರಕಾರ ರಾಷ್ಟ್ರೀಯ ಶಿಕ್ಷಣ ನೀತಿ–2020 ರನ್ವಯ ಎಲ್ಲ ಪದವಿಗಳ ಮೊದಲನೆಯ ಸೆಮಿಸ್ಟರ್‌ಗೆ Digital Fluency ಹಾಗೂ ಮೂರನೇ ಸೆಮಿಸ್ಟರ್‌ಗೆ Artificial Intelligence ಗಳನ್ನು ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಕಲಿಯಲು ಇಚ್ಛಿಯಿಸಿದ ವಿದ್ಯಾರ್ಥಿಗಳ ಯಾದಿಯನ್ನು ದಿನಾಂಕ: 09.11.2023 ರಂದು ಜರುಗಿದ ಪ್ರಾಚಾರ್ಯರ / Employability Skill ತರಬೇತಿ ಸಭೆಯಲ್ಲಿ ಸಲ್ಲಿಸಲು ಕೋರಲಾಗಿತ್ತು. ಆದರೆ, ಕೆಲವೇ ಮಹಾವಿದ್ಯಾಲಯಗಳು ಆನ್‌ಲೈನ್ ಮುಖಾಂತರ ಕಲಿಯಲು / ಕಲಿಸಲು ಇಚ್ಛೆ ವ್ಯಕ್ತಪಡಿಸಿದ್ದು, ಹಲವಾರು ಮಹಾವಿದ್ಯಾಲಯಗಳ ಪ್ರಾಚಾರ್ಯರು ಯಾವುದೇ ಮಾಹಿತಿಯನ್ನು ಇಲ್ಲಿಯವರೆಗೂ ನೀಡಿರುವುದಿಲ್ಲ. ಆದ್ದರಿಂದ ಮಾಹಿತಿ ನೀಡದೇ ಇರುವ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಆಫ್‌ಲೈನ್ ಮುಖಾಂತರ ಕಲಿಯಲು ಇಚ್ಛೆಪಟ್ಟಿದ್ದಾರೆಂದು ತೀರ್ಮಾನಿಸಲಾಗಿದೆ.

ಮುಂದುವರೆದು, ಸದರ ವಿಷಯಗಳನ್ನು ಆನ್‌ಲೈನ್ ಮುಖಾಂತರ ಕಲಿಯಲು NASSCOM ನವರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ, ಆನ್‌ಲೈನ್ ಮುಖಾಂತರ ಕಲಿಯಲು ಇಚ್ಛೆ ಪಟ್ಟ ವಿದ್ಯಾರ್ಥಿಗಳು NASSCOM ನಲ್ಲಿ ಸಂಬಂಧಪಟ್ಟ ಮಹಾವಿದ್ಯಾಲಯಗಳ ನೋಡಲ್ ಅಧಿಕಾರಿಗಳ ಮುಖಾಂತರ ವಿದ್ಯಾರ್ಥಿಗಳು ನೊಂದಣಿ ಮಾಡಿಕೊಳ್ಳುವುದು ಹಾಗೂ ಕಳೆದ ಸಾಲಿನಂತೆ, Digital Fluency ಯನ್ನು ಕಲಿಯಲು ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿಯಾದ ಪ್ರೊ. ಎಂ.ಎನ್.ಮೇಗೇರಿ, ಮೊಬೈಲ್ ಸಂ. 9964696264 ಮತ್ತು 8660782070 ಇ–ಮೇಲ್ megerimn@gmail.com ಹಾಗೂ Artificial Intelligence ಯನ್ನು ಕಲಿಯಲು ಡಾ. ಬಿ.ಬಿ.ಬಿರಾದಾರ ಮೊಬೈಲ್ ಸಂ. 9743101299 ಇ–ಮೇಲ್ biradar1979@gmail.com ಇವರನ್ನು ಸಂಪರ್ಕಿಸುವುದು.

ಪು.ತಿ.ನೋ.

ಮುಂದುವರೆದು, ವಿಶ್ವವಿದ್ಯಾಲಯ ಮಟ್ಟದ Digital Fluency ನೋಡಲ್ ಅಧಿಕಾರಿಯಾದ ಪ್ರೊ.. ಎಂ.ಎನ್.ಮೇಗೇರಿ ಹಾಗೂ Artificial Intelligence ನೋಡಲ್ ಅಧಿಕಾರಿಯಾದ ಡಾ. ಬಿ.ಬಿ.ಬಿರಾದಾರ ಇವರುಗಳಿಗೆ ತಿಳಿಸುವುದೇನೆಂದರೆ, ಈ ಮೇಲಿನಂತೆ ಸದರಿ ವಿಷಯಗಳನ್ನು ಕಳೆದ ಸಾಲಿನಂತೆ ಕಲಿಯಲು ಅನುಕೂಲವಾಗುವಂತೆ NASSCOM ಅಧಿಕಾರಿಗಳನ್ನು ಸಂಪರ್ಕಿಸಿ ಲಿಂಕ್‌ಗಳನ್ನು ಪಡೆದುಕೊಂಡು ಇಚ್ಛೆಯುಳ್ಳ ಮಹಾವಿದ್ಯಾಲಯಗಳ ನೋಡಲ್ ಅಧಿಕಾರಿಗಳಿಗೆ ವಿಳಂಬ ಮಾಡದೇ ಅನುಕೂಲ ಮಾಡಿಕೊಡಲು ಈ ಮೂಲಕ ಸೂಚಿಸಲಾಗಿದೆ.

ಆದ್ದರಿಂದ, ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ಈ ಮೇಲಿನಂತೆ ಕ್ರಮ ಕೈಗೊಂಡು ಸದರ ವಿಷಯಗಳನ್ನು ವಿದ್ಯಾರ್ಥಿಗಳು ಕಲಿಯುವ ಪ್ರಕ್ರಿಯೆಯನ್ನು ದಿನಾಂಕ: 13.01.2024ರ ಒಳಗಾಗಿ ಪೂರ್ಣಗೊಳಿಸಲು ಈ ಮೂಲಕ ಸೂಚಿಸಲಾಗಿದೆ.

**ವಿ.ಸೂ:** ಹಾವೇರಿ ಜಿಲ್ಲೆಯ ವ್ಯಾಪ್ತಿಯ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು 2023-24ನೇ ಸಾಲಿನಲ್ಲಿ ಪದವಿ ತರಗತಿಗಳ 1ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು Digital Fluency ಯನ್ನು ಕಲಿಯಲು ಹಾವೇರಿ ವಿಶ್ವವಿದ್ಯಾಲಯವನ್ನು ಸಂಪರ್ಕಿಸಲು ಸೂಚಿಸಲಾಗಿದೆ. 2022-23ನೇ ಸಾಲಿನಲ್ಲಿ ಸದರ ವಿಷಯದಲ್ಲಿ ಅನುತ್ತೀರ್ಣರಾಗಿದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಈ ಮೇಲಿನಂತೆ ಸಂಪರ್ಕಿಸಬಹುದು.

ಕುಲಸಚಿವರು

ಗೆ,

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.
2. ಡಾ. ಎಂ.ಎನ್.ಮೇಗೇರಿ, Digital Fluency ನೋಡಲ್ ಅಧಿಕಾರಿ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
3. ಡಾ. ಬಿ.ಬಿ.ಬಿರಾದಾರ, Artificial Intelligence ನೋಡಲ್ ಅಧಿಕಾರಿ, ಕರ್ನಾಟಕ ಕಲಾ / ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.
4. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ ಇವರಿಗೆ ಮಾಹಿತಿಗಾಗಿ.

**ಸಾದರಪೂರ್ವಕವಾಗಿ ಪ್ರತಿ:**

1. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಸಿಸ್ಟಮ್ ವಿಶ್ಲೇಷಕರು (System Analysist), ಗಣಕಯಂತ್ರ ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಅಧೀಕ್ಷಕರು, ಪರೀಕ್ಷಾ ಗೌಪ್ಯ/ ಸ್ನಾತಕೋತ್ತರ / ಪ್ರಶ್ನೆ ಪತ್ರಿಕೆ / ಸಾಮಾನ್ಯ ಆಡಳಿತ ವಿಭಾಗ, ಕ.ವಿ.ವಿ. ಧಾರವಾಡ.
7. ಅಧೀಕ್ಷಕರು, ಸಿ.ಡಿ.ಸಿ. (ಸಂಯೋಜನೆ) ವಿಭಾಗ, ಕ.ವಿ.ವಿ. ಧಾರವಾಡ.